ದಿನಾಂಕ 18.06.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ:**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಈ ಮೂಲಕ ಸಲ್ಲಿಸುತ್ತಿದ್ದೇನೆ, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

ಸಾಕ್ಷಿದಾರರು ಗುರುತಿಸಿದ ಒಂದು ಆರ್ ಟಿ ಸಿ ಯನ್ನು ನಿಪಿ 1 ಎಂದು, ಮ್ಯುಟೇಷನ್ ರಿಜಿಸ್ಟರ್ ಪ್ರತಿಯನ್ನು ನಿಪಿ 2 ಎಂದು ಗುರುತಿಸಲಾಯಿತು.

ದಿಃ 21.04.2017 ರ ಮೂಲ ವಿಲ್ ಕಳೆದಿರುತ್ತದೆ ಎಂದು ಹೇಳಿ ಸಾಕ್ಷಿದಾರರು ಗುರುತಿಸಿದ ದಿಃ 21.04.2017 ರ ನೊಂದಾಯಿತ ವಿಲ್ ನ ದೃಢೀಕೃತ ನಕಲನ್ನು ನಿಪಿ 3 ಎಂದು ಗುರುತಿಸಲಾಯಿತು. ಜಿ ಸೋಮಶೇಖರಯ್ಯರವರ ಮರಣ ಪ್ರಮಾಣ ಪತ್ರವನ್ನು ನಿಪಿ 4 ಎಂದು, ಹೆಚ್ ಎಂ ಗಂಗಾಬಿಕೆ ರವರ ಮರಣ ಪ್ರಮಾಣ ಪತ್ರವನ್ನು ನಿಪಿ 5 ಎಂದು, ವಂಶವೃಕ್ಷವನ್ನು ನಿಪಿ 6 ಎಂದು, ಅರ್ಜಿದಾರರ ಆಧಾರ್ ಕಾರ್ಡನ ನೋಟರೈಸ್ಡ್ ಪ್ರತಿಯನ್ನು ಮೂಲ ಆಧಾರ್ ಕಾರ್ಡನೊಂದಿಗೆ ತಾಳೆ ಮಾಡಿ ತಾಳೆಯಾದ ಕಾರಣ ನಿಪಿ 7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಎದುರುದಾರರು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಎಸ್ ಎ ಹಿದಾಯತ್ ಉಲ್ಲಾ ಷರೀಫ್ )
III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.